ಈಗ ಅದನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"2011ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 6) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ. ವಿಧೇಯಕಕ್ಕೆ ಅನುಮೋದನೆ ದೊರಕಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

2. ಕರ್ನಾಟಕ ಧನ ವಿನಿಯೋಗ (ಸಂಖ್ಯೆ 5) ವಿಧೇಯಕ 2011 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2011ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ 5) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1993-94, 2002-03, 2003-04 ಇದರಲ್ಲಿ ಅನುದಾನಕ್ಕಿಂತ ಹೆಚ್ಚುವರಿ ಆದ ವೆಚ್ಚವನ್ನು ಸಕ್ರಮಗೊಳಿಸುವ ಬಗ್ಗೆ PAC ಯಿಂದ ಅದರ ವರದಿಯನ್ನು ಕಳುಹಿಸಿ ಕೊಟ್ಟಿದ್ದಾರೆ. ಅದರ ಆಧಾರದಲ್ಲಿ ಇದನ್ನು ಮುಂದುವರೆಸಿದ್ದೇವೆ.

ಅವರೇ ಕಳುಹಿಸಿ ಕೊಟ್ಟಿರುವುದು. ಆದಕಾರಣ ಅವರಿಗೆ ವಿಶೇಷವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಇದನ್ನು ಚರ್ಚೆ ಇಲ್ಲದೆ ಅಂಗೀಕಾರ ಮಾಡಬಹುದು. ಅವರು ಕಳುಹಿಸಿ ಕೊಟ್ಟಿರುವ ಕಾರಣ ಅವರು ಪೂರ್ತಿ ಅಧ್ಯಯನ ಮಾಡಿಯೇ ಕಳುಹಿಸಿ ಕೊಟ್ಟಿದ್ದಾರೆ. ನಾನು ವಿಶೇಷವಾಗಿ ಇದನ್ನು ಏಕೆ ಉಲ್ಲೇಖ ಮಾಡುತ್ತೇನೆಂದರೆ ಸನ್ಮಾನ್ಯ ಜಯಚಂದ್ರರವರು ಕೊಟ್ಟಂತಹ ಈ ವರದಿ ನಮ್ಮ ಆರ್ಥಿಕ ನಿರ್ವಹಣೆಗೆ ಹೆಚ್ಚು ಬಲ ಕೊಡುವಂತಹ ಕೆಲಸ ಕಾರ್ಯಗಳನ್ನು ಮಾಡಿದೆ. ಈಗಾಗಲೇ ಅವರು

ಸೂಚಿಸಿರುವಂತಹ ವಿಚಾರಗಳ ಬಗ್ಗೆ ಸರ್ಕಾರ ಕೂಡ ಅದನ್ನು ಪರಿಗಣಿಸುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತಿದೆ. ನಿಮಗೆ ವಿಶೇಷವಾದ ಅಭಿನಂದನೆಗಳನ್ನು ಸದನದ ಮುಖಾಂತರ ಸಲ್ಲಿಸುವುದಕ್ಕೆ ಇಚ್ಛೆಪಡುತ್ತೇನೆ. ಇದನ್ನು ಅಂಗೀಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

"2011ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 5) ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.

ಅಧ್ಯಕ್ಷರು : ಈಗ ವಿಧೇಯಕವನ್ನು ಖಂಡ ಂಡವಾಗಿ ಮತಕ್ಕೆ ಹಾಕುತ್ತೇನೆ.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3ರವರೆಗೆ

ಅಧ್ಯಕ್ಷರು : ಖಂಡ 2 ರಿಂದ 3 ಎರಡೂ ಸೇರಿದಂತೆ ಈ ವಿದೇಯಕದ ಅಂಗವಾಗಿರುತ್ತದೆ ಎಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು
ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ.
(ಖಂಡ 2 ಮತ್ತು 3 ವಿಧೇಯಕದ ಅಂಗವಾದವು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಮೊದಲನೆ ಖಂಡ ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು
ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ

(ಪ್ರಥಮ ಖಿಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿವೆ.)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬೇಕು.

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ವಿ. ಸದಾನಂಡಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2011ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 5) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ.
ಈಗ ಅದನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"2011ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 5) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ. ವಿಧೇಯಕಕ್ಕೆ ಅನುಮೋದನೆ ದೊರಕಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

3. ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕ 2011 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, 2011ನೇ ಸಾಲಿನ ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತರಿಗಳ ಪರವಾಗಿ) : ಮನ್ಯ ಅಧ್ಯಕ್ಷರೆ: 2011–12ರ ಆಯವ್ಯಯ ಭಾಷಣದಲ್ಲಿ ಆಯವ್ಯಯದ ಸಂದರ್ಭದಲ್ಲಿ ಒಂದಷ್ಟು ಪ್ರಸ್ತಾವನೆಗಳನ್ನು ನಾವು ಮಾಡಿದ್ದೆವು. ವಿಶೇಷವಾಗಿ ವ್ಯವಸಾಯ ಕ್ಷೇತ್ರ, ಕೃಷಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಬಯೋ ಟೆಕ್ನಾಲಜಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಈ ಕ್ಷೇತ್ರಗಳಲ್ಲಿ to give impetus, ಒಂದು ಉತ್ತೇಜನ ಕೊಡುವುದಕ್ಕೋಸ್ಕರ ಒಂದಷ್ಟು concession ಕೊಡಬೇಕೆಂದು proposal ಕಳುಹಿಸಿದರು. ಆ proposal ಅನ್ನು ಪರಿಣಾಮ ಕಾರಿಯಾಗಿ ಜಾರಿಗೆ ತರುವುದಕ್ಕೋಸ್ಕರ ಸ್ಟ್ಯಾಂಪ್ ಆಕ್ಟ್‌ಗೆ ನಾವು ಅಮೆಂಡ್ ಮೆಂಟ್ ತರುತ್ತಿದ್ದೇವೆ. ದಯವಿಟ್ಟು ಪಾಸ್ ಮಾಡಿ ಕೊಡಬೇಕು.

SRI SIDDARAMAIAH : What are those concessions you are giving? To whom you are giving?

ಶ್ರೀ ಎಸ್. ಸುರೇಶ್ ಕುಮಾರ್ : ನಮ್ಮಲ್ಲಿ ನಾಲ್ಕು ಪಾಲಿಸಿಗಳನ್ನು ಮಾಡುತ್ತೇವೆ. The Integrated Karnataka Agri-Business Development Policy, 2011. This is subsequent to that budget proposal.